ಕರಾವಳಿಯಲ್ಲಿ ಈ ತಳಿ ಕ್ಷಯಿಸುತ್ತಾ ಹೋದರೂ ಉತ್ತರ ಕನ್ನಡ ಜಿಲ್ಲೆಯ ಶಿರಸಿ ಸುತ್ತಮುತ್ತ ಸ್ವಲ್ಪ ಮಟ್ಟಿಗೆ ಉಳಿದುಕೊಂಡಿದೆ. ಅಲ್ಲಿ ಕರಾವಳಿಗಿಂತ ಹೆಚ್ಚು ಕೆಂತಿ ಮುಳ್ಳುಸೌತೆ ತಳಿ ಸಂಪತ್ತಿದೆ. ಒಮ್ಮೊಮ್ಮೆ ಹಳ್ಳಿಗಳಂಚಿನ ಪೇಟೆಗಳ ಅಂಗಡಿಗಳಿಗೆ, ಸಂತೆಗೆ ಬರುವುದಿದೆ.

ಶಿರಸಿಯ ಕೃಷಿಕ ಲೇಖಕ ವಿನಾಯಕ ನರೂರು ಈ ತಳಿಯ ಬಗ್ಗೆ ಅಧ್ಯಯನ ಮಾಡಿದ್ದಾರೆ, ಅವರ ಪ್ರಕಾರ, 'ಇದು ಮಲೆನಾಡಿನಲ್ಲಿ ಮಳೆಗಾಲದಲ್ಲಿ ಬೆಳೆಸುವ ಮುಳ್ಳು ಸೌತೆ. ಹೊಳಪಿನ ಹಸಿರು ಬಣ್ಣದ ಸಿಪ್ಪೆ. ತಿಳಿ ಹಳದಿ ಕೇಸರಿ ಮಿಶ್ರಿತ ತಿರುಳು. ಮುಕ್ಕಾಲು ಅಡಿ ಉದ್ದ. ಬೀಜ ಬೆಳೆಯುವ ಮುನ್ನ ಕೊಯ್ದರೆ, ತಾಜಾ ತರಕಾರಿಯಾಗಿ ಬಳಕೆಗೆ ಸೂಕ್ತ. ಇನ್ನೊಂದು ಬಿಳಿ ತಿರುಳಿನ ಹೆಸರಿನ ಸವತೆಯ ತಿರುಳು ಕೆನೆ ಬಣ್ಣ ಹೊಂದಿದೆ.' ವಿನಾಯಕರ ಪತ್ನಿ ಲತಾ ನರೂರು ಕೆಂತಿ ಮುಳ್ಳುಸೌತೆಯಿಂದ (ಶಿರಸಿ ಕಡೆ ಬರೇ 'ಸವತೆ' ಎನ್ನುತ್ತಾರೆ) ತೆಳ್ಳೇವು, ಕೋಸಂಬರಿ, ಹಶಿ, ಪಚ್ಚಡಿ, ಉಪ್ಪಿಟ್ಟು ಇತ್ಯಾದಿಗಳ ಪಾಕಸರಣಿಯನ್ನೇ ಮಾಡುತ್ತಾರೆ.

## ನೇರ ತಿನ್ನಲು ಅತ್ಯುತ್ತಮ

'ಇವೆಲ್ಲಕ್ಕಿಂತ ಈ ಸೌತೆ ಉಪ್ಪು ಖಾರದ ಜತೆ ನೇರ ತಿನ್ನಲು ಹೇಳಿ ಮಾಡಿಸಿದಂತಹುದು', ವಿನಾಯಕ ಬೊಟ್ಟು ಮಾಡುತ್ತಾರೆ, 'ಹೋಳುಗಳನ್ನು ತಟ್ಟೆ ತುಂಬ ಪೇರಿಸಿಟ್ಟರೆ, ಸುತ್ತಲೂ ಜನ ಸೇರುತ್ತಾರೆ. ಇನ್ನೊಂದು ಚಿಕ್ಕ ಬಟ್ಟಲಲ್ಲಿ ಹರಳುಪ್ಪು, ನಿಂಬೆರಸ, ಸೂಜಿಮೆಣಸು ಸೇರಿಸಿ ನುರಿದು, ಒಂದೆರಡು ಚಮಚ ಕೊಬ್ಬರಿ ಎಣ್ಣೆ ಬಿಟ್ಟು ಇರಿಸಬೇಕು. ಆ ರಸಪಾಕದಲ್ಲಿ ಸೌತೆ ಹೋಳು ಅದ್ದಿ ಬಾಯಿಗೆ ಹಾಕಿದರೆ ಆಹಾ, ಸ್ವರ್ಗ ಅಲ್ಲೇ! ನೋಡನೋಡುತ್ತಲೇ ತಟ್ಟೆ ಖಾಲಿ. "ಇನ್ನೊಂದು ಕಾಯಿ ಇದ್ರೆ ತಗಂರ್ರೋ" ಅನ್ನುವ ಆಗ್ರಹ ತಪ್ಪಿದ್ದಲ್ಲ.' ಸೀಸನಿನಲ್ಲಿ ಒಂದಷ್ಟು ಜನ ಸೇರಿದ ಸಭೆ, ಸಮಾರಂಭಗಳಲ್ಲಿ ಈ ಮುಳ್ಳುಸೌತೆ ತಿನ್ನಲು ಕೊಡಿ. 'ಮೊದಲ ಬಾರಿ ತಿನ್ನುವವರು ಯಾರು ಯಾರು ಇದ್ದೀರಿ' ಎಂದು ಕೇಳಿ. ಎಪ್ಪತ್ತು ಶೇಕಡ ಮಂದಿಯೂ ಈ ತಳಿಯ ಪರಿಚಯ ಇಲ್ಲದವರೇ! ಈ ತಳಿ ಕತ್ತಲಲ್ಲೇ ಇರುವ ಕಾರಣ ಊರಲ್ಲೇ ಗೆಲ್ಲುವ ಅವಕಾಶದಿಂದ ವಂಚಿತವಾಗಿದೆ.

ಬೆಳೆಯುವ ಜಿಲ್ಲೆಗಳಲ್ಲೇ ಬಹುಪಾಲು ಜನರಿಗೆ ಈ ವಿಶಿಷ್ಟ ಮುಳ್ಳುಸೌತೆಯ ತಳಿಯ ಬಗ್ಗೆ ತಿಳಿದೇ ಇಲ್ಲ! ಇದಕ್ಕೆ ಎರಡು ಕಾರಣಗಳಿವೆ. ಮೊದಲನೆಯದು ಇದು ಮಾರುಕಟ್ಟೆಗೆ ಬರುವುದಿಲ್ಲ. ಎರಡನೆಯ ಕಾರಣ ಒಂದು ವಿಶೇಷ ತಳಿ ಎಂಬುದಾಗಿ ಯಾರೂ ಇದಕ್ಕೆ ಐಡೆಂಟಿಟಿ ಕೊಟ್ಟಿಲ್ಲ. ಇತರ ಮುಳ್ಳುಸೌತೆಗಳ ಜತೆ ಇದೂ ಒಂದು ಎಂದೇ ಎಲ್ಲರೂ ಪರಿಗಣಿಸುತ್ತಿದ್ದಾರೆ. ದೇಸೀ ಬೀಜ ಮಾರುವಲ್ಲೂ ಎಲ್ಲೂ ಈ 'ಕೆಂತಿ ಮುಳ್ಳುಸೌತೆ'ಯ ಬೀಜ ಪ್ರತ್ಯೇಕವಾಗಿ ಮಾರುತ್ತಿಲ್ಲ.



ಶಿರಸಿ ಕೇವಿಕೆಯಲ್ಲಿ ಮುಳ್ಳುಸೌತೆಗಳ ತುಲನಾತ್ಮಕ ಮೌಲ್ಯಮಾಪನ ಚಿತ್ರ: ಕೇವಿಕೆ ಶಿರಸಿ

## ಅಳಿದುಹೋಗಲು ಇಳಿ ಲೆಕ್ಕ

ಮನೆ ಮಟ್ಟದ ತರಕಾರಿ ಕೃಷಿ ಕಡಿಮೆಯಾಗುತ್ತಿದೆ. ಕಾರ್ಮಿಕರ ಸಮಸ್ಯೆ, ಕೋತಿ ಕಾಟ ಮುಖ್ಯ ಕಾರಣ. ಈ ಹಿನ್ನೆಲೆಯಲ್ಲಿ ಕೆಂತಿ ಮುಳ್ಳುಸೌತೆಯನ್ನು ಜನಪ್ರಿಯಗೊಳಿಸಿ ತಳಿ ಸಂರಕ್ಷಣೆಗಾಗಿ ಕಾರ್ಯಕ್ರಮ ರೂಪಿಸಿಕೊಳ್ಳಬೇಕಾದ ಅಗತ್ಯವಿದೆ.

ಉಡುಪಿ ಜಿಲ್ಲೆಯ ಹಿರಿಯಡ್ಕದ ತರಕಾರಿ ಕೃಷಿಕ ಮುಂಡುಜೆ ಸುರೇಶ್ ನಾಯಕ್ ಈ ಬಾರಿ ಕೆಂತಿ ಮುಳ್ಳುಸೌತೆ ಬೆಳೆಸಿದ್ದಾರೆ. ಬಹುಶಃ ಇದು ವಾಣಿಜ್ಯ ಮಟ್ಟದ ಮೊತ್ತಮೊದಲ ಯತ್ನ. ಪ್ರಾಕೃತಿಕ ಏರುಪೇರಿನಿಂದ ಸ್ವಲ್ಪ ಸಮಸ್ಯೆಯಾದರೂ ಈ ತಳಿಯ ವೈಶಿಷ್ಟ್ಯ ಅವರಿಗೆ ಮನದಟ್ಟಾಗಿದೆ. 'ಮಾಮೂಲಿ ಮುಳ್ಳುಸೌತೆ ಮತ್ತು ಇದಕ್ಕೆ ಹಗಲು – ರಾತ್ರಿಯ ವ್ಯತ್ಯಾಸವಿದೆ. ಇದನ್ನು ತಿಂದವರೆಲ್ಲಾ ಮತ್ತೆಮತ್ತೆ ಕೇಳುತ್ತಿದ್ದಾರೆ. ಕೇಳಿದವರಿಗೆ ಕೊಡುವಷ್ಟು ನಮ್ಮಲ್ಲಿಲ್ಲ. ಬೀಜಕ್ಕಾಗಿ ಕಾಯಿ ಹಣ್ಣಾಗಲು ಬಿಟ್ಟಿದ್ದೇನೆ' ಎನ್ನುತ್ತಾರೆ ಸುರೇಶ್.

ಕಮರ್ಷಿಯಲ್ ಆಗಿ ಬೆಳೆಯುವ ಜಾತಿಯಷ್ಟು ಇಳುವರಿ ಇದು ಕೊಡದು. ಆದರೆ ರುಚಿ ನೋಡಿದ ಮಂದಿ ಹೆಚ್ಚು ಬೆಲೆ ಕೊಡಲು ತಯಾರಾದಾರು. ಸರಿಯಾದ ರೀತಿಯಲ್ಲಿ ಕೃಷಿ ಮಾಡಿ ತಕ್ಕ ಮಟ್ಟಿನ ಬೆಳೆ ಸಿಕ್ಕರೆ ಇದನ್ನು ಬೆಂಗಳೂರಿನವರೆಗೂ ತಲುಪಿಸಬಹುದು. ಉತ್ತರ ಕನ್ನಡ ಜಿಲ್ಲೆಯಲ್ಲಿ ಬೆಳೆದು ರಾತ್ರಿ ಬಸ್ಸಿನಲ್ಲಿ ಬೆಂಗಳೂರು ತಲುಪಿಸಿದರೆ ಇದು ಅಲ್ಲಿನ ಮಂಗಳೂರು ಸ್ಟೋರ್ಸ್ ಮಾತ್ರವಲ್ಲ ದೊಡ್ಡದೊಡ್ಡ ಹೈಪರ್ ಮಾರ್ಕೆಟ್ಟುಗಳಲ್ಲೂ ಗ್ರಾಹಕ ಒಲವು ಗಳಿಸಬಹುದು.

## ಶಿರಸಿ ಕೇವಿಕೆಯ ಉಮೇದು

ಶಿರಸಿಯ ಕೃಷಿ ವಿಜ್ಞಾನ ಕೇಂದ್ರ ಈ ತಳಿಯ ಅಭಿವೃದ್ಧಿಯ ಬಗ್ಗೆ ಆಸಕ್ತಿ ವಹಿಸಿದೆ. 'ನನ್ನ ಹುಟ್ಟೂರು ಚಿಕ್ಕೆರೂರು. ಅದು ಅಪೂರ್ವವಾಗಿ ಅಲ್ಲಿನ ಸಂತೆಗೆ ಬರುತ್ತದಂತೆ. ಹಾವೇರಿ ಜಿಲ್ಲೆಯಲ್ಲೂ ಕೆಲವೆಡೆ ಈ ತಳಿ ಇರುವ ಸುದ್ದಿ ಸಿಕ್ಕಿದೆ' ಎನ್ನುತ್ತಾರೆ



ಹಿಂದೆ ಬಲಿತು ಹಣ್ಣಾದ ಕೆಂತಿ ಮುಳ್ಳುಸೌತೆ; ಎದುರು ಕಡಗಲಮಂಡೆ ಮುಳ್ಳುಸೌತೆ.

ಕೇವಿಕೆ ಮುಖ್ಯಸ್ಥೆ ಡಾ. ರೂಪಾ ಪಾಟೀಲ್.

ಈಚೆಗೆ ಇಲ್ಲಿನ ತೋಟಗಾರಿಕಾ ವಿಜ್ಞಾನಿ ಡಾ. ಡಿ.ಕೆ. ಹರೀಶ್ ಕೆಂತಿ ಮುಳ್ಳುಸೌತೆ ಮತ್ತಿತರ ಎರಡು ಸ್ಥಳೀಯ ತಳಿಗಳ ತುಲನಾತ್ಮಕ ಮೌಲ್ಯಮಾಪನ ನಡೆಸಿದರು. ಉಳಿದೆರಡು ಸ್ಥಳೀಯ ತಳಿಗಳು ಅನುಕ್ರಮವಾಗಿ 30ರಲ್ಲಿ 13.64 ಮತ್ತು 18.50 ಅಂಕ ಗಳಿಸಿದರೆ, ಕೆಂತಿ ಮುಳ್ಳುಸೌತೆ 24.10 ಅಂಕ ಪಡೆಯಿತು.

'ಸ್ಥಳೀಯ ರೈತರಿಂದ ಉತ್ತಮ ಬೀಜ ಪಡೆದು ನಾವು ಕೇವಿಕೆಯಲ್ಲಿ ಈ ತಳಿಯನ್ನು ಬೆಳೆಸುತ್ತೇವೆ. ಕೊಯ್ಲಿನ ಸಂದರ್ಭದಲ್ಲಿ ಕ್ಷೇತ್ರೋತ್ಸವ ನಡೆಸಿ ಊರವರು, ಮಾಧ್ಯಮದವರನ್ನು ಆಹ್ವಾನಿಸುತ್ತೇವೆ. ಆ ಮೂಲಕ ಹೆಚ್ಚಿನ ಜನರಿಗೆ ಇದರ ಪರಿಚಯವಾಗಬಹುದು. ಜತೆಜತೆಗೆ ಮುಂದಿನ ಋತುವಿನಲ್ಲಿ ಇದರದೇ ಬೀಜವನ್ನೂ ಆಸಕ್ತರಿಗೆ ಒದಗಿಸುವ ಕೆಲಸ ಮಾಡುತ್ತೇವೆ' ಎನ್ನುತ್ತಾರೆ ಡಾ. ಹರೀಶ್.

ಕರಾವಳಿಯಲ್ಲಿ ಈ ತಳಿ ಮಳೆಗಾಲದ ಕೃಷಿಗೆ ಮಾತ್ರ ಸೂಕ್ತ ಎಂಬ ಅಭಿಪ್ರಾಯವಿದೆ. ಆದರೆ ಶಿರಸಿ ಕಡೆ ಇದನ್ನು ಇತರ ಋತುಗಳಲ್ಲೂ ಬೆಳೆದವರಿದ್ದಾರೆ. ಈ ಬಗ್ಗೆ ಮತ್ತು ಇದರ ಇಳುವರಿ ಎಷ್ಟಿದೆ ಎನ್ನುವ ಬಗ್ಗೆಯೂ ಅಧ್ಯಯನ ಆಗಬೇಕಿದೆ.

ಶಿರಸಿ ಸುತ್ತಮುತ್ತಲಿನ ಇನ್ನೊಂದು ಸ್ಥಳೀಯ ಕೆಂಪು ತಿರುಳಿನ ಸವತೆಯ ಬಗ್ಗೆ ವಿನಾಯಕ ನರೂರು ಗಮನ ಸೆಳೆಯುತ್ತಾರೆ. 'ಅದರ ಹೆಸರು ಕಡಗಲಮಂಡೆ ಸವತೆ. ಉದ್ದ ಕಡಿಮೆ, ತುಸು ಗುಂಡಗಿರುವುದರಿಂದ ಕಡೆಗೋಲಿಗೆ ಹೋಲಿಸಿ ಈ ಹೆಸರು ಕೊಟ್ಟಿರಬೇಕು' ಎನ್ನುತ್ತಾರೆ. ವಾಟ್ಸ್‌ಆ್ಯಪ್ ಗ್ರೂಪುಗಳ ಮೂಲಕ ಈ ತಳಿ ಕರಾವಳಿಗೂ ತಲುಪಿದೆ; ಮೆಚ್ಚುಗೆ ಪಡೆದಿದೆ. 'ರುಚಿಯಲ್ಲಿ ಕೆಂಪು ತಿರುಳಿನದು ಮತ್ತು ಕಡಗಲಮಂಡೆ ಎರಡೂ ಒಂದೇ ಥರ' ಎನ್ನುತ್ತಾರೆ ಕಾಸರಗೋಡು ಜಿಲ್ಲೆಯ ಕೃಷಿಕ ಶ್ರೀಹರಿ ಭಟ್ ಸಜಂಗದ್ದೆ. ಇವೆರಡೂ ಜನಪ್ರಿಯವಾಗಬಲ್ಲ, ಸಂರಕ್ಷಿಸಬೇಕಾದ ಮುಳ್ಳುಸೌತೆ ತಳಿಗಳು.

ಚಿತ್ರಗಳು: ವಿನಾಯಕ ನರೂರು

ಪ್ರತಿಕ್ರಿಯಿಸಿ: feedback@sudha.co.in